ಅಭಿವೃದ್ಧಿ ಮಾಡುವುದಕ್ಕಿಂತ ಈ ಪ್ರವಾಸಿ ಕೇಂದ್ರಗಳನ್ನು ಯಾರು ಸುಧಾರಣೆ ಮಾಡಿ ಅಲ್ಲಿ ಹೆಚ್ಚಿನ ಪ್ರವಾಸಿಗರು ಬರುವ ಹಾಗೆ ಮಾಡುತ್ತೇವೆಂದು ಖಾಸಗಿಯವರು ಮುಂದೆ ಬಂದರೆ ಅಂಥಹ ಖಾಸಗಿಯವರಿಗೆ ಅವುಗಳನ್ನು ಬಿಟ್ಟುಕೊಟ್ಟು ಅಭಿವೃದ್ಧಿ ಮಾಡಿಸಬೇಕೆಂದು ತೀರ್ಮಾನ ಮಾಡಿದೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಈಗಾಗಲೇ ತಾವು ತೆಗೆದುಕೊಂಡಿರುವ ಪ್ರವಾಸಿ ಕೇಂದ್ರಗಳ ಸಮರ್ಪಕವಾದ ಸೌಕರ್ಯಗಳನ್ನು ಕಲ್ಪಿಸಿಕೊಡುವ ಕೆಲಸ ಯಶಸ್ವಿಯಾಗಿ ನಡೆದಿಲ್ಲ. ಇವತ್ತು ಇರುವಂತಹ ಪ್ರವಾಸಿಕೇಂದ್ರಗಳಲ್ಲಿ ಎಷ್ಟು ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ ಎಂದರೆ ರಸ್ತೆ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸಿ ಈ ಇಲಾಖೆಗೆ ನೀಡಬೇಕಾಗಿರುವ ಬಗ್ಗೆ ಸರ್ಕಾರ ಏನಾದರೂ ಭರವಸೆ ಕೊಡುತ್ತೆರೆಯೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಪ್ರವಾಸಿ ಕೇಂದ್ರಗಳ ಹತ್ತಿರ ಪ್ರವಾಸಿ ಹೊಟೇಲ್‌ಗಳಿವೆ ಮತ್ತು ಪ್ರವಾಸಿ ಮಂದಿರಗಳಿವೆ, ನಾನು ಬಹಳ ಹಿಂದೆ ನಿಮ್ಮ ಪ್ರವಾಸೋದ್ಯಮ ಇಲಾಖೆಗೆ ಸೇರಿದಂತಹ ಕೆಮ್ಮಣ್ಣಗುಂಡಿ ಹತ್ತಿರದಲ್ಲಿರುವ ಒಂದು ಪ್ರವಾಸಿಕೇಂದ್ರಕ್ಕೆ ಹೋಗಿದ್ದೆ. ಅಲ್ಲಿ ನಿಮ್ಮ ಪ್ರವಾಸಿ ಅತಿಥಿ ಗೃಹದಲ್ಲಿ ತಿಗಣೆ, ಜಿರಲೆ, ಸೊಳ್ಳೆ ಒಡೆದುಹೋದಂಥ ಬಲ್ಬುಗಳು ಮತ್ತು ನೀರು ಸುರಿಯುತ್ತಿರುವಂಥ ಕೊಳಾಯಿತು ಇವುಗಳೆಲ್ಲಾ ಅಲ್ಲಿ ಇದೆ. ಇದು ಎಲ್ಲಾ ಪ್ರವಾಸಿ ಗೃಹಗಳ ಹಣೆಬರಹಗಳು. ಇನ್ನೂ ಪ್ರವಾಸಿ ಹೊಟೇಲ್‌ಗಳು ಅಂದರೆ ನಾವು ತಿನ್ನದೇ ಇರತಕ್ಕಂತಹ ತಿಂಡಿಗಳನ್ನೆಲ್ಲಾ ಅಲ್ಲಿ ಮಾಡುತ್ತಾರೆ. ಇದರಿಂದ ಪ್ರವಾಸಿಗರಿಗೆ ತುಂಬಾ ತೊಂದರೆಯಾಗುತ್ತದೆ. ಆದುದರಿಂದ ನಿಮ್ಮ ಕಾಲದಲ್ಲಿಯಾದರೂ ಪ್ರವಾಸಿಗರಿಗೆ ಅನುಕೂಲಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಜೆ.ಹೆಚ್. ಪಟೇಲ್ : ಆ ಉದ್ದೇಶದಿಂದಲೇ ಹಿಂದಿನ ಸರ್ಕಾರ ತಿಗಣೆಗಳನ್ನು, ಸೊಳ್ಳೆಗಳನ್ನು ಬೆಳೆಸಿದ್ದು ತಪ್ಪು ಎಂದು ಹೇಳಿ ಈ ಸರ್ಕಾರ ಹೊಸ ವಿದೇಶಿಯನ್ನು, ನಮ್ಮ ವಾಟಾಳ್ ನಾಗರಾಜ್‌ರವರಂಥ ಪ್ರವಾಸಿಗರು ಬರಲಿ ಎಂದು ಈ ಅಭಿವೃದ್ಧಿ ಮಾಡುತ್ತಾ ಇದ್ದೇವೆ.

ಬಾಗೇಪಲ್ಲಿ ಮತ್ತು ಸೋಮನಾಥಪುರದ ವಿದ್ಯುತ್ ಲೈನ್‌ಗಳ ಬದಲಾವಣೆ

917ಸಿ - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಾಗೇಪಲ್ಲಿ ಮತ್ತು ಸೋಮನಾಥಪುರ ವಿಭಾಗಗಳಿಗೆ ವಿದ್ಯುತ್ ಸರಬರಾಜು ಲೈನುಗಳನ್ನು ಹಾಕಿ ಎಷ್ಟು ವರ್ಷಗಳಾಗಿವೆ. ಆ ವಿದ್ಯುತ್ ಲೈನಿಗೆ ವಿದ್ಯುತ್ ಸರಬರಾಜು ಮಾಡುವ ಶಕ್ತಿ ಈಗ ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಆ ವಿದ್ಯುತ್ ಲೈನಿನ ಬದಲಾವಣೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಗೌರಿಬಿದನೂರು - ಬಾಗೆಪಲ್ಲಿ ವಿದ್ಯುತ್ ಲೈನು ಬಹಳ ಹಳೆಯ ಲೈನಾಗಿದ್ದು ಸುಮಾರು 25 ವರ್ಷಕ್ಕೂ ಮೇಲ್ಪಟುಷ್ಟು ಹಳೆಯದಾಗಿದೆ. ಬಾಗೇಪಲ್ಲಿ - ಸೋಮನಾಥಪುರ ಲೈನನ್ನು ನಿರ್ಮಾಣ ಮಾಡಿ ಸುಮಾರು 12 ವರ್ಷವಾಗಿದೆ. ಗೌರಿಬಿದನೂರು - ಬಾಗೇಪಲ್ಲಿ - ಸೋಮನಾಥಪುರ ವಿದ್ಯುತ್ ಲೈನು ಓವರ್‌ಲೋಡ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಾದಲಿ ಗ್ರಾಮದಲ್ಲಿ 66 ಕೆ.ವಿ. ವಿದ್ಯುತ್ ಸಬ್-ಸ್ಟೇಷನನ್ನು ನಿರ್ಮಾಣ ಮಾಡಲಾಗುತ್ತಿದ್ದು ಸಾದಲಿಯಿಂದ ಬಾಗೇಪಲ್ಲಿಯವರೆಗೆ ಇನ್ನೊಂದು 66 ಕೆ.ವಿ. ವಿದ್ಯುತ್ ಮಾರ್ಗವನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

12.00 ಪಿ.ಎಂ

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕೊಟ್ಟಿರತಕ್ಕಂತಹ ಉತ್ತರದಲ್ಲಿ ಒಂದು ಮಾಹಿತಿ ಸರಿಯಿಲ್ಲ ನನ್ನ ಪ್ರಕಾರ. ಇನ್ನೊಂದು, ಇದಕ್ಕೆ ಪರಿಹಾರವನ್ನು ನಿರ್ದಿಷ್ಟವಾಗಿ ಸೂಚನೆ ಮಾಡಿಲ್ಲ. ಸೋಮನಾಥಪುರ ಬಾಗೇಪಲ್ಲಿ ವಿದ್ಯುತ್ ಲೈನನ್ನು ಹಾಕಿ 12 ವರ್ಷಗಳಾಗಿದೆಯೆಂದು ಉತ್ತರದಲ್ಲಿ ಬಂದಿದೆ. ಇದು ಸರಿಯಲ್ಲ. ಅದು ಸುಮಾರು 18 ವರ್ಷಗಳ ಮೇಲಾಗಿದೆ. ಇದರಿಂದಾಗಿ ಏನಾಗುತ್ತದೆ ಎಂದರೆ ಆ ಒಂದು ಪ್ರದೇಶದಲ್ಲಿ ಬೇಡಿಕೆ ಎಷ್ಟು ಇತ್ತೋ ಆ ಬೇಡಿಕೆಗೆ ಸಾಧ್ಯವಾಗುವಷ್ಟು ಶಕ್ತಿ ಇಲ್ಲದೆ ಆ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನ ತೊಂದರೆಯಾಗುತ್ತಿದೆ. ರೈತರ ಎಲ್ಲಾ ಬೆಳೆಗಳ ನಾಶವಾಗಿರತಕ್ಕಂಥದ್ದು ಒಂದು. ಎರಡನೆಯದಾಗಿ ಗೌರಿಬಿದನೂರು, ಬಾಗೇಪಲ್ಲಿ ನಡುವೆ ಸುಮಾರು 25 ವರ್ಷಗಳಿಂದ ಹಾಕಿರತಕ್ಕಂತಹ ಒಂದು ಲೈನ್ ಇದೆ.

ಅಧ್ಯಕ್ಷರು : ಇದು ಬಹಳ ಸರಳವಾದ ಪ್ರಶ್ನೆ. ನಿಮಗೆ ಉತ್ತರ ಕೊಟ್ಟಿರುವುದು ಸಮಾಧಾನ ಆಗಿಲ್ಲ ಎಂದರೆ ಸಪ್ಲಿಮೆಂಟರಿ ಕೇಳಿ. ದೀರ್ಘವಾಗಿ ಹೇಳುವುದು ಬೇಡ. ನನಗೆ ಟೈಮ್ ಅಡ್ಜಸ್ಟ್ ಮಾಡುವುದಕ್ಕೆ ಆಗುವುದಿಲ್ಲ. ಸಪ್ಲಿಮೆಂಟರಿ ಕೇಳಿಬಿಡಿ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಗೌರಿಬಿದನೂರು ಮತ್ತು ಬಾಗೇಪಲ್ಲಿ ಲೈನನ್ನು ಹೊಸದಾಗಿ ಹಾಕಬೇಕಾಗಿದೆ ಅದರ ಕೆಪ್ಯಾಸಿಟಿ ಜಾಸ್ತಿ ಆಗಬೇಕಾಗಿದೆ. ಅದಕ್ಕೆ ನಿರ್ದಿಷ್ಟವಾದ ಭರವಸೆಯನ್ನು ಸರ್ಕಾರ ಕೊಡಬೇಕಾಗಿದೆ. ಮತ್ತೆ ಸಾದಲಿಯಿಂದ 66 ಕೆ.ವಿ. ಸಬ್‌ಸ್ಟೇಷನನ್ನು ನಿರ್ಮಾಣ ಮಾಡಲಾಗುತ್ತಿದ್ದು ಸಾದಲಿಯಿಂದ ಬಾಗೇಪಲ್ಲಿವರೆಗೆ ಇನ್ನೊಂದು 66 ಕೆ.ವಿ. ವಿದ್ಯುತ್ ಮಾರ್ಗವನ್ನು ನಿರ್ಮಾಣ ಮಾಡತಕ್ಕ ಪ್ರಸ್ತಾವನೆ ಸರ್ಕಾರದಲ್ಲಿ ಇದೆಯೆಂದು ಹೇಳಿದ್ದಾರೆ. ಅದು ಬಹಳ ನಿಧಾನ ಆಗುತ್ತದೆ. ಇದರಿಂದ ತಕ್ಷಣ ಸಮಸ್ಯೆ ಪರಿಹಾರ ಆಗುವುದಿಲ್ಲ. ಸರ್ಕಾರದಲ್ಲಿ ಇದರ ಬಗ್ಗೆ ನಿರ್ದಿಷ್ಟವಾದ ಸೂಚನೆ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಕಷ್ಟ ಏನು ಎಂದರೆ ಸುಮಾರು 25-30 ವರ್ಷಗಳಿಂದ ಹಿಂದೆ ಹಾಕಿದ ಲೈನ್ ಹಳೆಯದಾಗಿದೆ. ಅವುಗಳನ್ನು ನಾವು ತಕ್ಷಣ ರೀಪ್ಲೇಸ್ ಮಾಡುವುದಕ್ಕೆ ಆಗುವುದಿಲ್ಲ. ಆದರೂ ವೋಲ್ಟೇಜ್ ಇಂಪ್ರೂವ್‌ಮೆಂಟ್ ಮತ್ತು ವಿದ್ಯುತ್ ಸಪ್ಲೈ ಇಂಪ್ರೂವ್‌ಮೆಂಟ್‌ಗೆ ಸಬ್‌ಸ್ಟೇಷನ್‌ಗಳನ್ನು ಹೆಚ್ಚು ಮಾಡುತ್ತಾ ಇದ್ದೇವೆ. ಮಾನ್ಯ ಸದಸ್ಯರಿಗೆ ತಿಳಿದ ಹಾಗೆ ಅಲ್ಲೂ ತೊಂದರೆಯಾಗಿದೆ, ವೋಲ್ಟೇಜ್ ಕಡಿಮೆಯಾಗಿದೆ. ರೈತರಿಗೆ ತೊಂದರೆಯಾಗಿದೆ ಎಂಬುದನ್ನು ಗಮನಿಸಿ ಸಾದಲಿ ಗ್ರಾಮದಿಂದ 66 ಕೆ.ವಿ. ಸಬ್‌ಸ್ಟೇಷನ್ ಮಾಡಿದರೆ ಸ್ವಲ್ಪ ಇಂಪ್ರೂವ್‌ಮೆಂಟ್ ಆಗುತ್ತದೆ ಎಂದು ಮಾಡುತ್ತಿದ್ದೇವೆ. ಸಬ್‌ಸ್ಟೇಷನ್‌ನಿಂದ ಹೊಸದಾಗಿ ಜನರೇಟ್ ಮಾಡುವುದಿಲ್ಲ, ಆದರೆ ವೋಲ್ಟೇಜ್ ಮೇಟೈನ್ ಮಾಡುವುದಕ್ಕೋಸ್ಕರ ಹೆಚ್ಚು ಹೆಚ್ಚು ಮಾಡುತ್ತಾ ಇದ್ದೇವೆ, ಮತ್ತು ಮಾನ್ಯ ಸದಸ್ಯರ ಇಚ್ಛೆ ಪ್ರಕಾರ ಇದನ್ನು ಮಾಡುತ್ತಾ ಇದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಾದಲಿ ಸಬ್‌ಸ್ಟೇಷನ್‌ನಿಂದ ಸೋಮನಾಥಪುರ ಬಾಗೇಪಲ್ಲಿಗೆ ಹೆಚ್ಚು ಪ್ರಯೋಜನ ಆಗುವುದಿಲ್ಲ. ಅದರ ಬದಲು ಬಾಗೇಪಲ್ಲಿ ತಾಲ್ಲೂಕಿನಲ್ಲಿ ಸೂಚನೆ ಕೊಟ್ಟಿರುವ ರೀತಿಯಲ್ಲಿ ಸಬ್‌ಸ್ಟೇಷನ್ ಆಗಬೇಕಾಗಿದೆ. ನಾನು

ಕುಂಬಂಪಲ್ಲಿ ವಿಚಾರವನ್ನು ತಮ್ಮ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಲಿಫ್ಟ್ ಸಬ್‌ಸ್ಟೇಷನ್ ಆಗಬೇಕು ಎಂದು ಇದೇ ರೀತಿಯಲ್ಲಿ ಗುಡಿಬಂಡೆಯಲ್ಲಿ ಕೂಡ ಇನ್ನೊಂದು ಸಬ್‌ಸ್ಟೇಷನ್ ಆಗಬೇಕಾಗಿದೆ. ಏನೇ ಆದರೂ ಕೂಡ ಗೌರಿಬಿದನೂರು ಮತ್ತು ಬಾಗೇಪಲ್ಲಿ ಲೈನ್ ಬದಲಾವಣೆ ಮಾಡದೇ ಇದ್ದರೆ ಸಮಸ್ಯೆ ಹಾಗೆಯೇ ಇರುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ತಾವು ಒಂದು ಪತ್ರ ಬರೆಯಿರಿ. ಯಾವ ಯಾವ ಕ್ರಮಗಳನ್ನು ಕೈಗೊಂಡರೆ ಆ ಪ್ರದೇಶದ ವಿದ್ಯುತ್ ಸರಬರಾಜಿನಲ್ಲಿ ಮತ್ತು ವೋಲ್ಟೇಜ್ ಮೈಂಟೆನೆನ್ಸ್‌ಗೆ ಅನುಕೂಲವಾಗುತ್ತದೆ ಎಂಬುದನ್ನು ನಾನು ಕೆ.ಇ.ಬಿ.ಗೆ ಅದನ್ನು ಕಳುಹಿಸುತ್ತೇನೆ.

ಕಾಸರಗೋಡು ಮತ್ತು ಭಟ್ಕಳ್ ಬಂದರುಗಳಲ್ಲಿ ಹೂಳೆತ್ತುವುದು

747 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕಾಸರಕೋಡು ಮತ್ತು ಭಟ್ಕಳ ಬಂದರುಗಳಲ್ಲಿ ಹೂಳುವಿನಿಂದ ತುಂಬಿರುವುದು ನಿಜವೆ?

ಆ) ಈ ಬಂದರುಗಳಲ್ಲಿ ಹೂಳೆತ್ತುವ ಕೆಲಸ ಎಷ್ಟು ವರ್ಷಗಳ ಹಿಂದೆ ನಡೆಯಿತು?

ಇ) ಈ ಬಂದರುಗಳಲ್ಲಿನ ಹೂಳೆತ್ತುವ ಕ್ರಮವನ್ನು ಸರ್ಕಾರ ಎಂದು ಕೈಗೆತ್ತಿಕೊಳ್ಳುತ್ತದೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ನಿಜ

ಆ) 1983-84

ಇ) 75.00 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. 1995-96ನೇ ಸಾಲಿಗೆ ಹೂಳೆತ್ತುವ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಡಾ|| ಎಂ.ಪಿ. ಕರ್ಕಿ : ನನ್ನ ಪ್ರಶ್ನೆಗೆ 2 ಬಂದರುಗಳಿಗೆ 75 ಲಕ್ಷ ರೂಪಾಯಿಗಳನ್ನು ಮಂಜೂರಾತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ 75 ಲಕ್ಷದಲ್ಲಿ ಕಾಸರಗೋಡು ಬಂದರಿಗೆ ಎಷ್ಟು, ಭಟ್ಕಳ ಬಂದರಿಗೆ ಎಷ್ಟು ಮತ್ತು ಈ ಹಣವನ್ನು ಮೀನುಗಾರಿಕೆ ಈ ಸೀಸನ್‌ನಲ್ಲೇ ಖರ್ಚು ಮಾಡುತ್ತೀರಾ ಎನ್ನತಕ್ಕಂತಹ ಎರಡು ಪ್ರಶ್ನೆಯನ್ನು ಕೇಳುತ್ತಾ ಇದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಈ 75 ಲಕ್ಷ ರೂಪಾಯಿಗಳು ಕೇವಲ ಭಟ್ಕಳಕ್ಕೆ ಮಾತ್ರ ಉಪಯೋಗ ಮಾಡುತ್ತಾ ಇದ್ದೇವೆ. ಹೊನ್ನಾವರದ ಬಗ್ಗೆ ಈವರೆಗೆ ಸರ್ವೆ ಮಾಡಿಸಿಲ್ಲ. ಅದನ್ನು ಸರ್ವೆ ಮಾಡಿಸಿ ಅದನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಈ ಸೀಸನ್‌ನಲ್ಲೇ ಮಾಡಿಸುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಭಟ್ಕಳದ್ದು ಈ ಸೀಸನ್‌ನಲ್ಲಿ 1995-96ರಲ್ಲಿ ಮಾಡಲಾಗುತ್ತದೆ.